ಓ ಎಸ್ ನಂ. 69/2020

ಪಿ.ಡಬ್ಲ್ಯೂ :1

ದಿನಾಂಕ :20-03-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ನಾನು ಹತ್ತನೇ ತರಗತಿಯವರೆಗೆ ವ್ಯಾಸಾಂಗ ಮಾಡಿದ್ದೇನೆ . ದಾವಾ ಷೆಡ್ಯೂಲ್ 1 ನೇ ಸ್ವತ್ತು ಒಟ್ಟು 9 ಎಕರೆ 19 ಗುಂಟೆ ವಿಸ್ತೀರ್ಣವಿದೆ . ಸದರಿ ಒಟ್ಟು ವಿಸ್ತೀರ್ಣಕ್ಕೆ ಸಂಬಂಧಿಸಿ ಈ ದಾವೆಯನ್ನು ಸಲ್ಲಿಸಿದ್ದೇನೆ . ದಾವಾ ಷೆಡ್ಯೂಲ್ 1 ನೇ ಸ್ವತ್ತಿನ ಚಕ್ಕುಬಂದಿ ಪೂರ್ವಕ್ಕೆ ಸೇವಂತಿಬಾಯಿ ಕೃಷ್ಣೋಜಿ ರಾವ್ ರವರ ಜಮೀನು ಪಶ್ಚಿಮಕ್ಕೆ ಎಲ್ಲೋಜಿ ರಾವ್ ರವರ ಸ್ವತ್ತು , ಉತ್ತರಕ್ಕೆ ಲಕ್ಷ್ಮೀಬಾಯಿ ಸಿದ್ದೋಜಿ ರಾವ್ ರವರ ಸ್ವತ್ತು , ದಕ್ಷಿಣಕ್ಕೆ 20 ಅಡಿಗಳ ರಸ್ತೆ ಇರುತ್ತದೆ . ದಾವಾ ಷೆಡ್ಯೂಲ್ 2 ನೇ ಸ್ವತ್ತಿನ ವಿಸ್ತೀರ್ಣ 5 ಎಕರೆ 4 ಗುಂಟೆ ಇರುತ್ತದೆ ಮತ್ತು ಚಕ್ಕುಬಂದಿ ತಿಳಿದಿದೆ . ಮೇಲೆ ಹೇಳಿದ ಸ್ವತ್ತುಗಳು ಮೂಲತಃ ನನ್ನ ತಾತ ಗುರುಬಸಯ್ಯ ರವರಿಗೆ ಸೇರಿದ ಸ್ವತ್ತುಗಳಾಗಿವೆ . ನಿಮ್ಮ ತಾತನಿಗೆ ಸದರಿ ಸ್ವತ್ತುಗಳು ಹೇಗೆ ಬಂದವು ಎಂದರೆ ಸಾಕ್ಷಿಯು ನನ್ನ ತಾತ ಪೂಜೆ ಮಾಡುತ್ತಿದ್ದರು ಆ ಕಾರಣ ಅವರಿಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ . ದಾವಾ ಸ್ವತ್ತುಗಳು ಇನಾಮ್ತಿ ಸ್ವತ್ತುಗಳು ಎಂದರೆ ಸರಿ . ನನ್ನ ತಾತನಿಗೆ ಸದರಿ ಸ್ವತ್ತುಗಳು ಅವರ ಪೂರ್ವಜರಿಂದ ಬಂದಿಲ್ಲ ಎಂದರೆ ಸರಿ . ಗುರುಬಸಯ್ಯ ರವರ ಪತ್ನಿ ಹೆಸರು ಪುಟ್ಟಮ್ಮ . ಅವರಿಗೆ ನನ್ನ ತಾಯಿ ಬಸವರಾಜಮ್ಮ ಒಬ್ಬರೇ ಮಗಳು . ನನ್ನ ತಾತ ಮತ್ತು ಅಜ್ಜಿ ಮರಣ ಹೊಂದಿದ್ದಾರೆ . ನನ್ನ ತಾತ ಮತ್ತು ಅಜ್ಜಿಯ ಮರಣ ನಂತರ ದಾವಾ ಷೆಡ್ಯೂಲ್ 1 ಮತ್ತು 2 ನೇ ಸ್ವತ್ತುಗಳಿಗೆ ನನ್ನ ತಾಯಿ ಒಬ್ಬರೇ ಮಾಲೀಕರಾಗಿದ್ದರು ಎಂದರೆ ಸರಿ . ನನ್ನ ತಾಯಿಯ ಜೀವಿತಾವಧಿಯಲ್ಲಿಯೇ ನನ್ನ ತಾತ ಮತ್ತು ಅಜ್ಜಿಯ ಮರಣ ಹೊಂದಿದ್ದಾರೆ ಎಂದರೆ ಸರಿ . ದಾವಾ ಷೆಡ್ಯೂಲ್ 1 ಮತ್ತು 2 ನೇ ಸ್ವತ್ತುಗಳಿಗೆ ನನ್ನ ತಾಯಿ ಒಬ್ಬರೇ ಮಾಲೀಕರಾಗಿ ಸ್ವಾಧೀನದಲ್ಲಿದ್ದರು ಎಂದರೆ ಸರಿ . ನನ್ನ ತಾಯಿಗೆ ದಾವಾ ಷೆಡ್ಯೂಲ್ 1 ಮತ್ತು 2 ನೇ ಸ್ವತ್ತುಗಳು ಆಕೆಯ ತಂದೆಯ ಕಡೆಯಿಂದ ಬಂದ ಕಾರಣ ಆಕೆಗೆ ಅವು ಪಿತ್ರಾರ್ಜಿತ ಸ್ವತ್ತುಗಳಲ್ಲ ಎಂದರೆ ಸರಿಯಲ್ಲ . ಈ ದಾವೆ ಸಲ್ಲಿಸಿದ ಸಮಯ ದಿಃ 30-08-2012 ರ ನೋಂದಾಯಿತ ದಾನ ಪತ್ರವನ್ನು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ . (ಸದರಿ ದಾಖಲೆಯನ್ನು ಪರಿಶೀಲಿಸಲಾಗಿ ಅದನ್ನು ನೋಂದಾಯಿತ ದಾನ ಪತ್ರದ ದೃಢೀಕೃತ ನಕಲಾಗಿದ್ದು ಸದರಿ ದಾಖಲೆಯನ್ನು ಇನ್ನಿತರೆ ದಾಖಲೆಗಳೊಡನೆ ದಾಖಲಾತಿ

ಪಟ್ಟಿಗೆ ನಮೂದಿಸಿ ವಾದಿಯು 07-09-2020 ರಂದು ನ್ಯಾಯಾಲಯಕ್ಕೆ ಸಲ್ಲಿಸಿರುವುದು ಕಂಡುಬಂದಿರುತ್ತದೆ .)

(ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ)

ಓದಿ ಹೇಳಿ, ಕೇಳಿದೆ, ಸರಿ ಇದೆ, ಎಂದರು.

SD/-
(ಅನುಪಮ.ಡಿ. )
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ, ಗುಬ್ಬಿ .